ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಪಿ ಸಿ ನಂ. **29/2023**

ಸಿ ಡಬ್ಲ್ಯೂ: **1**

| | | |
|---|---|---|
| ಸಾಕ್ಷಿಯ ಹೆಸರು | : | ವೆಂಕಟೇಶ್ ಭಟ್ ಬಿ |
| ತಂದೆಯ ಹೆಸರು | : | ಬಿ ವಾಸುದೇವ ಭಟ್ |
| ಪ್ರಾಯ | : | **64** ವರ್ಷ |
| ಉದ್ಯೋಗ | : | ವ್ಯಾಪಾರಾ |
| ವಾಸಸ್ಥಳ | : | ಸೋಮವಾರ ಪೇಟೆ , ಕೊಡಗು |

ದಿನಾಂಕ: **28.08.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಪಿರ್ಯಾದುದಾರರ ಪ್ರಮಾಣೀಕೃತ ಹೇಳಿಕೆ:

1. ನನ್ನ ತಂದೆ 2008 ನೇ ಸಾಲಿನಲ್ಲಿ ಬಂಟ್ವಾಳದಲ್ಲಿ ಲಕ್ಷ್ಮಿ ವೇಂಕಟೇಶ್ವರ ಸ್ವರ್ಣಾಭರಣ ಎಂಬ ಹೆಸರಿನ ಒಂದು ಚಿನ್ನದ ಅಂಗಡಿಯನ್ನು ತೆರೆದು ವ್ಯಾಪಾರ ನಡೆಸುತ್ತಿದ್ದರು. ಆಗಸ್ಟ 2015 ರಂದು ನನ್ನ ತಂದೆ ಕಾಲವಾಗಿರುತ್ತಾರೆ. ಆಭರಣದ ಅಂಗಡಿ ನಡೆಸುವ ಸಲುವಾಗಿ ಬಂಟ್ವಾಳದ ಮುಖ್ಯ ರಸ್ತೆಯಲ್ಲಿ ಕಟ್ಟಡವನ್ನು ಖರೀದಿಸಿರುತ್ತಾರೆ. ತನ್ನ ಜೀವಿತಾವಧಿಯಲ್ಲಿ ನಮ್ಮ ತಂದೆಯವರು ಆಸ್ತಿಗೆ ಸಂಬಂದಪಟ್ಟಂತೆ ನನ್ನ ಹಾಗೂ ನನ್ನ ತಮ್ಮ ಶಿವಾನಂದ ಭಟ್ (1ನೇ ಆರೋಪಿ) ಹೆಸರಿಗೆ ಮರಣ ಶಾಸನ ಪತ್ರವನ್ನು ಸೆಪ್ಟಂಬರ್ 2009ರಲ್ಲಿ ಬರೆದಿರುತ್ತಾರೆ. ನಮ್ಮೊಳಗೆ ಮಾತುಕತೆ ನಡೆದು ಚಿನ್ನದ ಅಂಗಡಿಯನ್ನು ಒಳಗೊಂಡಂತೆ ವಿಲ್ ನಲ್ಲಿ ಕಾಣಸಿದ ಇತರೆ ಸ್ವತ್ತುಗಳನ್ನು ಸಮಭಾಗವಾಗಿ ಭಾಗಮಾಡಿಕೊಳ್ಳಲು ನಾನು ಮತ್ತು ನನ್ನ ತಮ್ಮ ತೀರ್ಮಾನಿಸಿರುತ್ತೇವೆ.

2. ಶಿವಾನಂದ ಭಟ್, ನರಹರಿ ಭಟ್ ಮತ್ತು ಗೌತಮ್ ಭಟ್ ರವರುಗಳು ವ್ಯಾಪಾರದಲ್ಲಿ ಸಹಕರಿಸಿರುವುದರಿಂದ ಅವರುಗಳನ್ನು ಸೇರಿಸಿಕೊಂಡು ಬರುವ ಲಾಭದಲ್ಲಿ ಒಂದು ಅಂಶವನ್ನು ಅವರಿಗೂ ನೀಡುವಂತೆ ತಂದೆಯವರು ವಿಲ್ ನಲ್ಲಿ ಕಾಣಿಸಿರುತ್ತಾರೆ. ಲಕ್ಷ್ಮಿ ವೇಂಕಟೇಶ್ವರ ಸ್ವರ್ಣಾಭರಣ ಎಂಬ ಫರ್ಮನಲ್ಲಿ ನಾನು ಮತ್ತು ನನ್ನ ತಮ್ಮ ಭಾಗಿದಾರರಾಗಿರುತ್ತೇವೆ. 2 ಮತ್ತು 3 ನೇ ಆರೋಪಿತರು ವಿಲ್ ನಲ್ಲಿ ಕಾಣಸಿದ ಲಾಭಾಂಶಕ್ಕಾಗಿ ಮಾತ್ರ ವರ್ಕಿಂಗ್ ಪಾರ್ಟನರ್ ಆಗಿರುತ್ತಾರೆ. ಆರೋಪಿತರೆಲ್ಲರೂ ಸೇರಿಕೊಂಡು ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನಮ್ಮ ತಂದೆ ತೀರಿ ಹೋದ ನಂತರದಿಂದ ಪಾರ್ಟನರ್ ಶೀಫ್ ಪರ್ಮ ಯಾವುದೇ ಹಣವನ್ನು ನನಗೆ ಪಾವತಿಸಿರುವುದಿಲ್ಲ. ನನ್ನ ತಂದೆಯಿಂದ ಬಂದ ಆಸ್ತಿಗಳಲ್ಲಿ ನಾನು ಸಾಕಷ್ಟು ಹಣವನ್ನು ವ್ಯಯಿಸಿರುತ್ತೇನೆ ಈ ಸಂಬಂದ ಯಾವುದೇ ದಾಖಲೆಗಳನ್ನು ಆರೋಪಿತರು ನೀಡಲು ನಿರಾಕರಿಸಿರುತ್ತಾರೆ. 2021-22 ನೇ ಸಾಲಿನಲ್ಲಿ ನನ್ನ ಗಮನಕ್ಕೆ ತಾರದೆ ಮೀಟಿಂಗ್ ನಡೆಸಿ ಸದರಿ ಫರ್ಮ ಅನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿರುತ್ತಾರೆ. ಒಂದು ಕೋಟಿಗೂ ಮಿಗಿಲಾಗಿ ಸದರಿ ಫರ್ಮ ನಲ್ಲಿ ಚಿನ್ನಾಭರಣ ಇದ್ದವು. ನನ್ನ ಪಾಲಿನ ಎಲ್ಲಾ ಹಣವನ್ನು ಆರೋಪಿತರು ಅಕ್ರಮವಾಗಿ ಕಬಳಿಸಿರುತ್ತಾರೆ. ಅ ಮೂಲಕ ಆರೋಪಿತರು ನಂಬಿಕೆ ದ್ರೋಹ, ಮತ್ತು ವಂಚನೆಯನ್ನು ಎಸಗಿರುತ್ತಾರೆ. ಆದುರಿಂದ ಆರೋಪಿತರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

3. ಆರೋಪಿತರಿಗೆ ವಕೀಲರ ಮುಖಾಂತರ ನೋಟಿಸು ನೀಡಿದಾಗಿಯು ಸಹ ಈ ವರೆಗೂ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ. ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

1. ಬಂಟ್ವಾಳ ಉಪ ನೋಂದಾಣಾಧಿಕಾರಿಯವರು ದೃಢಿಕರಿಸಿ ನೀಡಿರುವ ದಿ. 24.09.2009 ರ ಮರಣ ಶಾಸನದ ಯಥಾ ಪ್ರತಿಯನ್ನು ನಿಸಿ-1 ಎಂದು,

2. ದಿ. 15.09.2015 ರ ಗಣಕಿಕೃತ ಬೋಗ್ಯ ಪತ್ರವನ್ನು ನಿಸಿ-2 ಎಂದು,

3. ಉದ್ದಿಮೆ ಪರವಾನಿಗೆಯ ಗಣಕಿಕೃತ ಪ್ರತಿಯನ್ನು ನಿಸಿ-3 ಎಂದು,

4. ದಿ. 13.05.2008 ರ ಗಣಕಿಕೃತ ಶುದ್ಧ ಕ್ರಯ ಪತ್ರವನ್ನು ನಿಸಿ-4 ಎಂದು,

5. ಸಾರ್ವಜನಿಕ ಮಾಹಿತಿ ಅಧಿಕಾರಿ ಜಿಲ್ಲಾ ನೋಂದಣಾಧಿಕಾರಿ ಕಚೇರಿ ಮಂಗಳೂರು ನೀಡಿರುವ ಹಿಂಬರಹ ನಿಸಿ-5 ಎಂದು,

6. ಸಾರ್ವಜನಿಕ ಮಾಹಿತಿ ಅಧಿಕಾರಿ ಜಿಲ್ಲಾ ನೋಂದಣಾಧಿಕಾರಿ ಕಚೇರಿ ರವರು ದೃಢಿಕರಿಸಿ ನೀಡಿರುವ ದಿ. 14.09.2015ರ ಡಿಡ್ ಆಫ್ ಪಾರ್ಟನರ್ ಶೀಪನ್ನು ನಿಸಿ-6 ಎಂದು ಗುರುತಿಸಲಾಯಿತು.

ಮುಂದುವರಿದ ವಿಚಾರಣೆಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,

ಬಂಟ್ವಾಳ